## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.218/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ನಿಂಗನಗೌಡ | ಚಾಸಾ | ಃ 04 |
| ತಂದೆ ಹೆಸರು | ಃ ಭರಮಣ್ಣಗೌಡ | ಪ್ರಾಸಾ | ಃ 12 |
| ವಯಸ್ಸು | ಃ 69 ವರ್ಷ | | |
| ವೃತ್ತಿ | ಃ ನಿವೃತ್ತ ಸರಕಾರಿ ನೌಕರ | | |
| ವಾಸ ಸ್ಥಳ | ಃ ರಾಜಾಪೂರ(ಬಿ) ಶಹಾಪೂರ ತಾಲೂಕ | | |

**ಸಾಕ್ಷಿಗೆ ಇಂದು ದಿನಾಂಕಃ 17.03.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ನಾನು ಹುಣಸಗಿಯಲ್ಲಿ 2013 ರಲ್ಲಿ ಸಹಕಾರಿ ಅಭಿವೃದ್ಧಿ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-1 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ನಮ್ಮ ಮೇಲಾಧಿಕಾರಿಗಳಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಯಾದಗಿರಿ ಇವರು ಏವುರು ಸೇವಾ ಸಹಕಾರ ಸಂಘದವರು ಬೆಳೆಮಿಮೆ ಹಣವನ್ನು ಹಂಚಿರುವುದಿಲ್ಲ ಅದರ ಬಗ್ಗೆ ತಪಾಸಣೆ ಮಾಡಿ ವರದಿ ಸಲ್ಲಿಸಲು ಹೇಳಿದ ಮೇರೆಗೆ, ನಾನು ಏವುರು ಸಹಾಕಾರ ಸಂಘಕ್ಕೆ ಭೇಟಿ ಕೊಟ್ಟಿರುತ್ತೇನೆ. ಆ ತಪಾಸಣೆ ಮಾಡುವ ಸಮಯದಲ್ಲಿ ಡಿ.ಸಿ.ಸಿ ಬ್ಯಾಂಕಿನ ಮೇಲ್ವಿಚಾಕರಾದ ಬಸವರಾಜ ಇವರು ಈ ಸಂಘದ ಪ್ರಭಾರಿ ಕಾರ್ಯದರ್ಶಿ ಆಗಿದ್ದರು. ಸದರಿಯವರಿಂದ ಸಂಘದ ಮಾಹಿತಿಯನ್ನು ಪಡೆದು ದಾಖಲೆಗಳನ್ನು ಪರಿಶೀಲಿಸಿ, ಸಂಘಕ್ಕೆ ಬಂದ ಬೆಳೆಮಿಮಾ ಹಣವನ್ನು ಆರೋಪಿತರು ಹಂಚದೇ ಇರುವುದು ಕಂಡುಬಂದಿರುತ್ತದೆ. ಅದನ್ನು ಪರಿಶೀಲಿಸಿ ವರದಿ ಸಲ್ಲಿಸಿರುತ್ತೇನೆ. ಆಗ ಬೆಳೆವಿಮೆ ರೂ.6,72,818/- ಹಣವನ್ನು 154 ಜನ ರೈತರಿಗೆ ಮಂಜೂರು ಆಗಿದ್ದು, ಸದರಿ ಮಾಹಿತಿಯನ್ನು ಬರೆದುಕೊಂಡು ವರದಿಯನ್ನು ಸಲ್ಲಿಸಿರುತ್ತೇನೆ. ಸಂಘದ ಕಾರ್ಯದರ್ಶಿಯಾದ ಗುರುನಾಥರೆಡ್ಡಿ ಇವರು ದಿನಾಂಕ 28-02-2013 ರಂದು ರೂ.2,32,600/- ಗಳನ್ನು ಹಂಚದೇ ಹಾಗೇ ಮುಂದುವರೆಸಿಕೊಂಡು ಹೋಗಿರುತ್ತಾರೆ. ದಿನಾಂಕ 13.03.2023 ರಂದು ಸದರಿಯವರು ರೂ.4,95,000/- ಗಳನ್ನು ಡ್ರಾ ಮಾಡಿಸಿರುತ್ತಾರೆ. ರೂ.2,00,000/- ಗಳನ್ನು ಅಮಾನತ್ತು ಖರ್ಚು ಹಾಕಿರುತ್ತಾರೆ. ಮತ್ತು ರೂ.3,00,000/- ನಗದು ಪುಸ್ತಕದಲ್ಲಿ ಜಮಾ ಮಾಡಿರುತ್ತಾರೆ. ರೂ.1,52,000/- ಹಣವನ್ನು ಅಧ್ಯಕ್ಷರ ಹೆಸರಿನಲ್ಲಿ ಅಮಾನತ್ತು

ಖರ್ಚು ಹಾಕಿರುತ್ತಾರೆ. ಒಟ್ಟು 6,72,818/- ಬೆಳೆವಿಮೆ ಹಣದಲ್ಲಿ ರೂ.4,50,000/- ಹಣ ಕೆ.ಜಿ.ಬಿ ನಗನೂರು ಬ್ಯಾಂಕನಲ್ಲಿ ಜಮಾ ಮಾಡಿರುತ್ತಾರೆ. ರೂ.1,52,000/- ಹಣವನ್ನು ಡಿ.ಸಿ.ಸಿ ಬ್ಯಾಂಕ ಸುರಪುರನಲ್ಲಿ ಜಮಾ ಮಾಡಿರುತ್ತಾರೆ. ಸದರಿ ಹಣವನ್ನು ಕಳೆದರೆ ಉಳಿದ ರೂ.70,818/- ಕಾರ್ಯದರ್ಶಿ ಹತ್ತಿರ ಉಳಿದಿರುತ್ತದೆ. ಸದರಿ ಹಣ ದುರ್ಬಳಿಕೆ ಆಗಿದೆ ಎಂದು ಮೇಲೋಟಕ್ಕೆ ಕಂಡು ಬರುತ್ತದೆ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹಣ ದುರ್ಬಳಕೆ ಆದ ಸಮಯದಲ್ಲಿ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿ ಆರೋಪಿತರು ಇದ್ದರು. ಆ ಕುರಿತು ದೃಡೀಕರಣವನ್ನು ನೀಡಿರುತ್ತೇನೆ. ವರದಿಯಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ವರದಿಯನ್ನು ನಿಪಿ-13 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಯಾದಗಿರಿ ಇವರ ನಡವಳಿಯನ್ನು ನಿಪಿ-14 ಎಂದು ಗುರುತಿಸಲಾಯಿತು. ದೃಡೀಕರಣ ಪತ್ರವನ್ನು ನಿಪಿ-15 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-15(ಎ) ಗುರುತಿಸಲಾಯಿತು. ಮುಖ್ಯಕಾರ್ಯನಿರ್ವಾಹಕ ಕೃಷಿ ಸಹಕಾರ ಸಂಘ ವಿಪೂರು ಇವರ ಘೋಷಾವಾರು ವರದಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಡಿ ಟಿ ಬಿ ವಕೀಲರಿಂದಃ**

ನನಗೆ ಮೇಲಾಧಿಕಾರಿಗಳಿಂದ ದಿನಾಂಕ 23-10-2013 ರಂದು ಆದೇಶ ಬಂದಿರುತ್ತದೆ. ನಾನು ಆದೇಶದ ಪ್ರಕಾರ ಪರಿಶೀಲಿಸಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಪದೇ ಪದೇ ಹೋಗಿ ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ವಿಪೂರು ಸೇವಾ ಸಹಕಾರ ಸಂಘದಲ್ಲಿ ಬೆಳೆವಿಮಾ ಹಣವನ್ನು ಹಂಚಿರುವುದಿಲ್ಲ ಪರಿಶೀಲಿಸಿ ವರದಿ ಸಲ್ಲಿಸುವಂತೆ ಆದೇಶವಾಗಿರುತ್ತದೆ. ಸದರಿ ಹಣ ಒಂದೇ ಸಲ ಬಂದಿರುತ್ತದೆ. ಯಾರು ಯಾರಿಗೆ ಎಷ್ಟು ಎಷ್ಟು ಮುಟ್ಟಿರುತ್ತದೆ ಅಂತಾ 154 ಜನ ರೈತರನ್ನು ವಿಚಾರಿಸಿರುವುದಿಲ್ಲ. ನಾನು 20-25 ದಿನಗಳವರೆಗೆ ವಿಚಾರಣೆ ಮಾಡಿರುತ್ತೇನೆ. ನಾನು 20 ರಿಂದ 25 ದಿನಗಳವರೆಗೆ ವಿಚಾರಣೆ ಮಾಡಿರುತ್ತೇನೆ ಎಂದು ಯಾವುದೇ ಹೇಳಿಕೆ ನೀಡಿಲ್ಲ.

**02.** ನಾನು ಸಹಕಾರ ಅಭಿವೃದ್ದಿ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಹುಣಸಗಿಯಲ್ಲಿ ನಮ್ಮ ಕಚೇರಿ ಇರುತ್ತದೆ. ನಮ್ಮ ಕಚೇರಿಯಲ್ಲಿ ಮುಮೆಂಟ ರಜಿಸ್ಟರ ಇರುವುದಿಲ್ಲ, ಆದರೆ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ಮತ್ತು ಡೈರಿ ಇರುತ್ತದೆ. ಮೇಲೆ ಹೇಳಿದ ವಿಚಾರಣೆ ಕುರಿತು ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ಸಮಯದಲ್ಲಿ ಸದರಿ ಟಿ.ಪಿ ಮತ್ತು ಡೈರಿ ಕಚೇರಿಯಲ್ಲಿ ಇತ್ತು. ನಾವು ಯಾವುದೇ

ಟಿ.ಪಿ ಮತ್ತು ಡೈರಿಯನ್ನು ಮಾಡಿರುವುದಿಲ್ಲ, ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಶೀಲಿಸಿದಾಗ ಆರೋಪಿತರು ಡ್ರಾ ಮಾಡಿದ ಹಣ ಸಂಘದ ಖಾತೆಯಲ್ಲಿ ಇತ್ತು ಎಂದರೆ ಸರಿ. ಹಣವನ್ನು ಪರಿಶೀಲಿಸಿದಾದ ನಂತರ ಎಲ್ಲಾ ಹಣವನ್ನು ಹಿಡುವಳಿದಾರರಿಗೆ ವಿತರಣೆ ಮಾಡಿದ ಬಗ್ಗೆ ಘೋಷವಾರು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಎಲ್ಲಾ ವರದಿಯನ್ನು ಸಲ್ಲಿಸಿದ ನಂತರ ಸದರಿ ಘೋಷವಾರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಹಾಯಕ ಸಹಕಾರ ಸಂಘಗಳ ನಿಬಂಧಕರು ಯಾದಗಿರಿ ಇವರು  ಆರೋಪಿತರು ನಿರ್ದೋಷಿಗಳು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಆ ಸಮಯದಲ್ಲಿ ನಾನು ವರ್ಗಾವಣೆ ಆಗಿದ್ದೆ ಎಂದು ನುಡಿಯುತ್ತಾರೆ. ಸದರಿ ಆದೇಶ ನನಗೆ ಗೊತ್ತಿದ್ದರೂ ಸಹಿತ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವರಿದಿ ಸಲ್ಲಿಸಿದ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿತರ ಮೇಲೆ ಕ್ರಿಮಿನಲ್ ಪ್ರಕರಣ ಮಾಡಲು ನನಗೆ ಯಾವುದೇ ಅಧಿಕಾರಿ ಇರುವುದಿಲ್ಲ. ಸದರಿ ಪ್ರಕರಣವನ್ನು ನಮ್ಮ ಇಲಾಖೆಯವರು ಮಾಡಿರುತ್ತಾರೆ. ಪ್ರಕಣದ ದಾಖಲಾದ ಒಂದು ವರ್ಷದ ಒಳಗೆ ಪೋಲೀಸ ಮುಂದೆ ಹೇಳಿಕೆ ನೀಡಿರುತ್ತೇನೆ. ಆದರೆ ನಿಖರವಾಗಿ ದಿನಾಂಕವನ್ನು ಹೇಳಲು ಆಗುವುದಿಲ್ಲ. ನಾವು ಹೇಳಿದಂತೆ ಆರೋಪಿತರು ಯಾವುದೇ ಹಣ ದುರುಪಯೋಗ ಪಡಿಸಿಕೊಂಡಿರುವುದಿಲ್ಲ, ಎಲ್ಲಾ ಹಿಡುವಳಿದಾರರಿಗೆ ಹಣ ಹಂಚಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ-5 ರವರ ಮಾತು ಕೇಳಿ ಈ ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-5 ರವರಿಗೂ ಮತ್ತು ಆರೋಪಿತರಿಗೂ ವೈಷಮ್ಯೆ ಇತ್ತು ಎಂದರೆ ಸರಿಯಲ್ಲ. ಚಾಸಾ-5 ರವರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡಿದ್ದು, ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮೇಲಾಧಿಕಾರಿಗಳ ಮಾತು ಕೇಳಿ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.